ಓ ಎಸ್ ನಂ. 36/2023
ಪಿ ಡಬ್ಲ್ಯು 1
ದಿನಾಂಕ 04/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಬಿ ಹೆಚ್ ಆರ್ ವಕೀಲರಿಂದಃ</u>

ಪ್ರತಿವಾದಿಗಳು ಅನಕ್ಷರಸ್ಥರು ಎಂದರೆ ಸರಿಯಲ್ಲ. ಸಾಲಪತ್ರಗಳೆಲ್ಲವೂ ಸಹ ಆಂಗ್ಲ ಭಾಷೆಯಲ್ಲಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಬ್ಯಾಂಕಿನಲ್ಲಿ ಎಲ್ ಡಿ ಓ ಸಿ 53 ಎಂಬ ವ್ಯವಸ್ಥೆ ಇದ್ದು ಒಂದು ವೇಳೆ ಕಕ್ಷಿದಾರರಿಗೆ ಆಂಗ್ಲ ಭಾಷೆ ತಿಳಿಯದೆ ಇದ್ದಲ್ಲಿ ಅದನ್ನು ಕನ್ನಡಕ್ಕೆ ಅನುವಾದ ಮಾಡಿ ಹೇಳಲಾಗುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಸಾಲಪತ್ರಗಳ ಅಂಗಳನ್ನು ಕನ್ನಡದಲ್ಲಿ ಅನುವಾದ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು 2017 ರಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. 2019 ರಲ್ಲಿ ಕರೋನಾ ಬಂದಿದ್ದರಿಂದ ಪ್ರತಿವಾದಿಗಳಿಗೆ ಕೋಳಿ ವ್ಯವಹಾರದಲ್ಲಿ ಸಾಕಷ್ಟು ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಾಲ ಪಡೆದ ನಂತರ ಸಾಕಷ್ಟು ಹಣವನ್ನು ನಮ್ಮ ಬ್ಯಾಂಕಿಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಾವತಿ ಮಾಡಿದ ಹಣವನ್ನು ಕಟಾವು ಮಾಡದೇ ಸಂಪೂರ್ಣ ಮೊತ್ತಕ್ಕೆ ಪ್ರಸ್ತುತ ದಾವೆಯನ್ನು ಹೂಡಲಾಗಿದೆ ಎಂದರೆ ಸಾಕ್ಷಿ ಪ್ರತಿವಾದಿಗಳು ಮರುಪಾವತಿ ಮಾಡಿರುವ ಹಣವನ್ನು ಕಟಾವು

ಮಾಡಿ ಉಳಿದ ಮೊತ್ತಕ್ಕೆ ದಾವೆ ಹೂಡಲಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ದೀರ್ಘಾವಧಿಯ ಸಾಲವನ್ನು ನೀಡಲಾಗಿತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.